# ಡಲ್ಲಾಸ್ ನಲ್ಲಿ ಶರಣ ಸಂಗಮ

## ಕಾಯಕವಿಲ್ಲದ ಶರೀರ ಕಾಯಿಲೆಯ ಗೂಡು

**ಚಿತ್ರದುರ್ಗ, ಜೂ. 30** : ಮಾನವ ದಾಹವನ್ನು ಬಿಟ್ಟರೆ ದಾಸೋಹವಾಗುತ್ತದೆ. ದಾಸೋಹದಲ್ಲಿ ಅನ್ನದಾಸೋಹ, ಜ್ಞಾನದಾಸೋಹ, ವಿಶೇಷ ಮಾನ್ಯತ ಪಡೆದಿದೆ. ಬಸವಣ್ಣನವರ ಕಲ್ಯಾಣ ರಾಜ್ಯದಲ್ಲಿ ಕೊಡುವ ಕೈಗಳು ಹೆಚ್ಚಾಗಿದ್ದವೇ ಹೊರತು ಬೇಡುವ ಕೈಗಳು ಇರಲಿಲ್ಲ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ನುಡಿದರು.

ಅಮೆರಿಕಾದ ಡಲ್ಲಾಸ್ ಜಿಲ್ಲೆಯ ಪ್ರಿಸ್ಕೋ ನಗರದ ಹನುಮಾನ್ ದೇವಾಲಯ ಸಮುದಾಯ ಭವನದಲ್ಲಿ ನಡೆದ ಶರಣಸಂಗಮ ಚಿಂತನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಗಳು, ಬಸವಣ್ಣನವರು 12ನೇ ಶತಮಾನದಲ್ಲಿ ಎಲ್ಲ ವರ್ಗದ ಎಲ್ಲ ಜಾತಿಯವರನ್ನು ಲಿಂಗಭೇದವಿಲ್ಲದೆ ಸೇರಿಸಿಕೊಂಡು ಸ್ಥಾಪಿಸಿದ ಅನುಭವ ಮಂಟಪವು ಇಂದಿನ ಸಂಸತ್‌ನ ಕಾರ್ಯವೈಖರಿಗೆ ಅನುಕರಣೀಯವಾಗಿದೆ.

ಪ್ರತಿಯೊಬ್ಬರು ಕಾಯಕದಲ್ಲಿ ತೊಡಗಬೇಕು. ಕಾಯಕ ಮಾಡದವರ ಶರೀರ ಮತ್ತು ಮನಸ್ಸು ಕಾಯಿಲೆಯ ಗೂಡಾಗುತ್ತದೆ. ದೈವೀಭಾವನೆಯೊಂದಿಗೆ ನಿಷ್ಠೆಯಿಂದ ಪ್ರಾಮಾಣಿಕವಾಗಿ ಸಮರ್ಪಣಾ ಭಾವದಿಂದ ನಿರ್ವಹಿಸಿದಾಗ ಅದು ಕಾಯಕವೆನಿಸಿಕೊಳ್ಳುತ್ತದೆ. ಇದನ್ನೆ ಬಸವಣ್ಣನವರು ಕಾಯಕವೇ ಕೈಲಾಸ ಎಂದಿದ್ದಾರೆ. ಇಂತಹ ಕಾಯಕದಿಂದ ಬರುವ ಉತ್ಪಾದನೆಯನ್ನು ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎನ್ನುವ ರೀತಿ ದಾಸೋಹದ ಮುಖಾಂತರ ವಿತರಿಸಬೇಕು. ಬೇಡುವವರು ಇಲ್ಲದೆ ಬಡವನಾದೆನಯ್ಯ ಎಂದಿದ್ದಾರೆ ಬಸವಣ್ಣನವರು. ಉತ್ಪಾದನೆ ಮತ್ತು ವಿತರಣೆ ಎರಡೂ ಸಮನಾಗಿದ್ದರೆ ಸಮಸಮಾಜ ನಿರ್ಮಾಣವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಭರತ್‌ಕುಮಾರ್ ಮಲ್ಲಿಕಾರ್ಜುನಪ್ಪ ಸ್ವಾಗತಿಸಿದರು. ವಿಎಸ್‌ಎನ್‌ಎ ಅಧ್ಯಕ್ಷ ಮಹದೇವ ವಂದಿಸಿದರು. ಮೀನಾ ಭಾರದ್ವಜ್ ನಿರ್ವಹಿಸಿದರು. ಪ್ರಶಾಂತ್ ದೇವರಾಜ್, ತಿಪ್ಪೇಸ್ವಾಮಿ, ಮಹೇಶ್, ಅನಿಲ್, ಚೇತನ್, ಡಾ. ಪ್ರಕಾಶ್ ರಾಮ್, ಮುರಳಿ, ಶಿವ ಸೇರಿದಂತೆ 300ಕ್ಕು ಹೆಚ್ಚು ಭಕ್ತಾದಿಗಳು ಭಾಗವಹಿಸಿದ್ದರು.


Sri Gurubasavalingaya Namaha
“Sharana Sangama”
Aashirvachana by
Shri Shivamurthy Muruga Sharanaru
Time : 5 pm to7.00pm
VSNA - Dallas Chapter


Sri Gurubasavalingaya Namaha
“Sharana Sangama”
Shri Shivamurthy Muruga Sharanaru
Date : June 26 th at Time : 5 pm to7.00pm
Welcome VSNA - Dallas Chapter



